ಕೃಷಿ ಮಾರಾಟ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳ ರಚನೆ

1374 (1681) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ): ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಮಾರಾಟ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಈ ಹಿಂದೆ ಅಳವಡಿಸಿಕೊಳ್ಳದೇ ಇರಲು ಕಾರಣಗಳೇನು;

ಆ) ಸದರಿ ನಿಯಮಗಳು ಈ ಇಲಾಖೆಯಲ್ಲಿ ಅಳವಡಿಸಿದಿರುವುದರಿಂದ ಈ ಇಲಾಖೆಯ ಮುಂಬಡ್ತಿ ಆದೇಶಗಳು ಇಲಾಖೆಯ ಅಧಿಕಾರಿಗಳ ಇಚ್ಛೆಯ ಮೇರೆಗೆ ನಡೆಯುತ್ತಿದ್ದ ವಿಚಾರ ನಿಜವೇ;

ಇ) ಅಮಾಲ್ಲ ಮೇಷನ್ ನಿಯಮದಡಿ ಈ ರೀತಿ ಅನ್ಯಾಯವಾಗಿರುವುದು ಕಂಡು ಬಂದಿದೆಯೇ; ಎಷ್ಟು ಜನರಿಗೆ ಅನ್ಯಾಯವಾಗಿದೆ; ಈ ರೀತಿ ಆಗಲು ಕಾರಣಗಳೇನು;

ಈ) ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಿಕೊಳ್ಳಲು ಇಲಾಖೆಗೆ ಇರುವ ತೊಂದರೆಗಳೇನು; ಸದರಿ ನಿಯಮಗಳನ್ನು ಅನುಷ್ಠಾನಗೊಳಿಸಲು ಇಲಾಖೆ ಬಯಸಿದೆಯೇ;

ಉ) ಈ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ; ಯಾವಾಗ ಸೇವಾ ನಿಯಮಗಳನ್ನು ಅನುಷ್ಠಾನಗೊಳಿಸಲಾಗುವುದು; ಇದಕ್ಕಾಗಿ ಸಮಿತಿಯನ್ನು ರಚಿಸಿ ನಿಯಮಗಳನ್ನು ರೂಪಿಸುತ್ತಿದೆಯೇ;

ಊ) ಈ ಎಲ್ಲಾ ನಿಯಮಗಳನ್ನು ಅಳವಡಿಸಿಕೊಂಡ ನಂತರ ಅಮಾಲ್ಗಮೆಷನ್ ಅಡಿಯಲ್ಲಿ ಅನ್ಯಾಯಕೊಳಗಾದ ನೌಕರರಿಗೆ ಬಡ್ತಿ ನೀಡಲು ಸರ್ಕಾರ ಪರಿಗಣಿಸುವುದೇ?

ಶ್ರೀ ಬೆಳ್ಳಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ):

ಅ) 1972-73ರಲ್ಲಿ ಸಹಕಾರ ಇಲಾಖೆಯಿಂದ ಬೇರ್ಪಟ್ಟು ಕೃಷಿ ಮಾರಾಟ ಇಲಾಖೆ ಅಸ್ತಿತ್ವಕ್ಕೆ ಬಂದಿರುತ್ತದೆ. ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸುವ ಕಾರ್ಯ ಬಾಕಿ ಇದ್ದಂತೆ 1975ರಲ್ಲಿ ಸರ್ಕಾರಿ ಆದೇಶ : ಆರ್‌ಡಿಸಿ:100:ಸಿಎಂಡಿ:74, ದಿನಾಂಕ:30-10-75ರಲ್ಲಿ ಕಾರ್ಯಕಾರಿ ಆದೇಶವನ್ನು ಸರ್ಕಾರವು ಹೊರಡಿಸಿರುತ್ತದೆ. ಮಾರುಕಟ್ಟೆ ಸಮಿತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧಿಕಾರಿ: ಸಿಬ್ಬಂದಿಗಳನ್ನು ಸರ್ಕಾರಿ ನೌಕರರೆಂದು ದಿನಾಂಕ: 1-3-1982ರಿಂದ ಸರಕಾರ ಪರಿಗಣಿಸಿ ಮಾರುಕಟ್ಟೆ ಸಮಿತಿ ಸೇವೆಯನ್ನು ರಚಿಸಿದ್ದು, ದಿನಾಂಕ:11-12-1984ರಿಂದ ಕರ್ನಾಟಕ ರಾಜ್ಯ ಮಾರುಕಟ್ಟೆ ಸಮಿತಿ ಸೇವೆ (ಸರ್ಕಾರಿ ಸೇವೆಗೆ ವಿಲೀನಗೊಂಡ ಮಾರುಕಟ್ಟೆ ಸಮಿತಿ ಸಿಬ್ಬಂದಿ ಸೇವಾ ಷರತ್ತುಗಳು) ನಿಯಮಗಳು 1984ನ್ನು ಜಾರಿಗೆ ತಂದಿರುತ್ತದೆ.

ಕೃಷಿ ಮಾರಕಟ್ಟೆ ಇಲಾಖೆ ಸೇವೆ ಮತ್ತು ಕೃಷಿ ಮಾರುಕಟ್ಟೆ ಸಮಿತಿ ಸೇವೆಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ವೃಂಜ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲು ಕ್ರಮ ಜರುಗಿಸಲಾಗಿದೆ. ಮಧ್ಯೆ ಮಾರುಕಟ್ಟೆ ಕಾಯ್ದೆಗೆ ಸಮಗ್ರ ತಿದ್ದುಪಡಿ ತರಲು ಶ್ರೀ ಅಜ್ಜೀಬಾಳ ಹೆಗಡೆ ಇವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದ್ದು, ಸದರಿ ಸಮಿತಿಯು ಮಾಡಿದ ಶಿಫಾರಸ್ಸಿನ ಮೇರೆಗೆ 1991ರಲ್ಲಿ ಕೃಷಿ ಮಾರುಕಟ್ಟೆ ಇಲಾಖೆ ಸೇವೆ ಮತ್ತು ಕೃಷಿ ಮಾರುಕಟ್ಟೆ ಸಮಿತಿ ಸೇವೆಗಳನ್ನು ಸಂಯೋಜಿಸಿ ನಿಯಮಗಳನ್ನು ರಚಿಸಲು ಅವಕಾಶ ಮಾಡಲಾಗಿದೆ. ದಿನಾಂಕ:4-6-1996ರಲ್ಲಿ

ಎರಡೂ ಸೇವೆಗಳನ್ನು ಸಂಯೋಜಿಸಿ ರಾಜ್ಯ ಕೃಷಿ ಮಾರಾಟ ಇಲಾಖಾ ಸೇವೆ (ಸಂಯೋಜಿತ) ನಿಯಮಾವಳಿಗಳನ್ನು ರಚಿಸಲಾಗಿದೆ. ತದನಂತರ ಸಯೋಜಿತ ಸೇವೆಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲು ಕ್ರಮ ಜರುಗಿಸಿದ್ದು, ಸರಕಾರದ ಪರಿಶೀಲನೆಯಲ್ಲಿದೆ.

ಆ) ಇಲ್ಲ

ಇ) ಇಲ್ಲ

ಈ) ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಲು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಉ) ಕೃಷಿ ಮಾರಾಟ ಇಲಾಖೆ ಸೇವೆಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲು ಸರ್ಕಾರದ ಹಂತದಲ್ಲಿ ಕ್ರಮ ಕೈಗೊಂಡಿದೆ.

ಊ) ಉದ್ಭವಿಸುವುದಿಲ್ಲ.

ಬಿಜಾಪುರ ಜಿಲ್ಲೆ ಬಬಲೇಶ್ವರ ಏತ ನೀರಾವರಿ ಯೋಜನೆಯ ನೀರಾವರಿ ಕ್ಷೇತ್ರದ ವಿವರ

1375 (1690) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿಯೋಜಿತ ಬಿಜಾಪುರ ಜಿಲ್ಲೆ ಬಬಲೇಶ್ವರ ಏತ ನೀರಾವರಿ ಯೋಜನೆಯಲ್ಲಿ ಬರುವ ನೀರಾವರಿ ಕ್ಷೇತ್ರ ಎಷ್ಟು;

ಆ) ಹಾಗೂ ಕಾಖಂಡಕಿ, ಸಂಗಾಪೂರ, ಶಗನಾಳ, ಕಂಬೋನಿ, ಮುಂತಾದ ಗ್ರಾಮಗಳ ಜಮೀನಿಗೂ ಈ ನೀರಾವರಿ ಯೋಜನೆ ವ್ಯಾಪ್ತಿಗೊಳಪಡುತ್ತಿದೆಯೇ (ವಿವರ ನೀಡುವುದು)?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) 7000 ಹೆಕ್ಟೇರ್‌ಗಳು

ಆ) ಸರ್ವೆ ಕಾರ್ಯವು ಮುಗಿದಿದ್ದು ವಿವರವಾದ ಅಂದಾಜು ವರದಿಯನ್ನು ತಯಾರಿಸಲಾಗುತ್ತದೆ. ವಿವರವಾದ ಅಂದಾಜು ವರದಿಯನ್ನು ತಯಾರಿಸಲಾಗುತ್ತದೆ. ವಿವರವಾದ ಅಂದಾಜು ವರದಿಯ ಈ ವಿವರಗಳು ಲಭ್ಯವಾಗುವುವು.

ಬಿಜಾಪುರ ಜಿಲ್ಲೆಯ ಮುಳವಾಡ ಏತ ನೀರಾವರಿ ಯೋಜನೆಯಿಂದ ನೀರಿನ ಹಂಚಿಕೆ

1376 (1687) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳವಾಡ ಏತ ನೀರಾವರಿ ಯೋಜನೆ ಅಡಿಯಲ್ಲಿ ಬಿಜಾಪುರ ಜಿಲ್ಲೆಯ ನೀರಿನ ಹಂಚಿಕೆಯಲ್ಲಿ 20 ಟಿ.ಎಂ.ಸಿ. ನೀರನ್ನು ಬೇರೆ ಜಿಲ್ಲೆಗಳಿಗೆ ಹರಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ;

ಆ) ಇದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಮುಳವಾಡ ಏತ ನೀರಾವರಿ ಎ ಸ್ಕೀಮಿನ ಕಾಮಗಾರಿ ಯಾವಾಗ ಪೂರ್ಣಗೊಳ್ಳುವುದು: ಹಾಗೂ ಸದರಿ ಸ್ಕೀಮಿನಲ್ಲಿ ಮಮದಾಪುರ, ರೇಣಿಹಾಳ್, ಆಸಂಗಿ ಮುಂತಾದ ಕೆರೆಗಳಿಗೂ ನೀರು ಬಿಡುವ ವಿಷಯ ಪ್ರಸ್ತಾಪದಲ್ಲಿದೆಯೇ (ವಿವರ ನೀಡುವುದು)